ದಿನಾಂಕಃ24-08-2021ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ -19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ಈಗ ನೋಡುತ್ತಿರುವ ದೃಢೀಕೃತ ಮತ್ತು ನಕಲು ಡಿ.ಟಿ.ಡಿ ಖುಲಾಸೆ ಪತ್ರ ನಿಪಿ-64 ರ ಪುಟ ಸಂಖ್ಯೆ.2 ರಲ್ಲಿ ದಸ್ತೂರ ವ ಗಣಕೀಕರಣ ಮಾಡಿದ ಶ್ರೀ ಎಸ್.ಆರ್ ಕುಲ್ಕರ್ಣಿ ವ್ಯಕ್ತಿ ನಾನೇ ಆಗಿದ್ದು ಮತ್ತು ಸಹಿ ನನ್ನದು. ಸಾಕ್ಷಿ ಗುರುತಿಸಿರುವ ಸಾಕ್ಷಿಯ ಸಹಿಯನ್ನು ನಿಪಿ-64(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಈಗ ನೋಡುತ್ತಿರುವ ನಿಪಿ-33 ಮೂಲ ಡಿ.ಟಿ.ಡಿಖುಲಾಸೆ ಪತ್ರದ 2 ನೇ ಪುಟದಲ್ಲಿರುವ ದಸ್ತೂರು ವ ಗಣಕೀಕೃತ ಮಾಡಿದ ಸಹಿ ನನ್ನದು ಸಾಕ್ಷಿ ಗುರುತಿಸಿರುವ ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 2 ನೇ ಆರೋತರನು ಮತ್ತು ಈ ದಿನ ಗೈರು ಹಾಜರು ಇದ್ದ 1 ನೇ ಆರೋಪಿತನು ಆ ದಿನ ಬಂದು ನಿಪಿ-64 ದಾಖಲೆಯನ್ನು ಮಾಡಿಸಿರುತ್ತಾರೆ . ( **1 ನೇ ಆರೋಪಿತನು ಈ ದಿನ ಗೈರು ಹಾಜರು ಇದ್ದು ಅರ್ಜಿ ಸಲ್ಲಿಸಿದ್ದು ಮತ್ತು 1 ನೇ ಆರೋಪಿತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ** .)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು.ಡಿಡಿ. ವಕೀಲರಿಂದಃ**

ನಾನು ಬಾಂಡ್ ರೈಟರ ಆಗಿ ಸನ್ 2005-06 ರಿಂದ ಕೆಲಸ ಮಾಡುತ್ತಾ ಇದ್ದೇನೆ . ಸಾಮಾನ್ಯವಾಗಿ ಅಡಮಾನ ಪತ್ರ ಮತ್ತು ಖುಲಾಸೆ ಪತ್ರ ಮಾಡಲು ಬ್ಯಾಂಕ್ ನ ಯಾವುದೇ ಅಧಿಕಾರಿಗಳು ಹಾಜರು ಇರುವುದಿಲ್ಲ ಎಂದರೆ ನಿಜ. ಅವರು ತಮ್ಮ ಹಾಜರಾತಿ ವಿನಾಯಿತಿ ಪತ್ರವನ್ನು ಕಾಗದಪತ್ರದೊಂದಿಗೆ ಕಳುಹಿಸಿರುತ್ತಾರೆ ಆ ಆಧಾರದ ಮೇಲೆ

ಅಡಮಾನ ಪತ್ರ ಮತ್ತು ಖುಲಾಸೆ ಪತ್ರ ವನ್ನು ಮಾಡಿರುತ್ತೇನೆ ಎಂದರೆ ನಿಜ. ಈಗ ನೋಡುತ್ತಿರುವ ನಿಪಿ-32 ಸದರಿ ಹಾಜರಾತಿ ವಿನಾಯಿತಿ ಪತ್ರ ಆಗಿರುತ್ತದೆ ಎಂದರೆ ನಿಜ. ಸದರಿ ನಿಪಿ-32 ದಾಖಲೆ ನೋಡಿದ ನಂತರ ನಾನು ನಿಪಿ-33 ದಾಖಲೆಯನ್ನು ತಯಾರಿಸಿರುತ್ತೇನೆ ಎಂದರೆ ನಿಜ. ಅದೇ ರೀತಿ ನಾನು ಡಿ.ಟಿ.ಡಿ ಖುಲಾಸೆ ಪತ್ರವನ್ನು ತಯಾರಿಸಿ ಕೊಟ್ಟ ನಂತರ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಯ ಸಹಿ ಪಡೆದ ನಂತರ ಅದನನ್ನು ಉಪನೊಂದಣಾಧಿಕಾರಿಯ ಮುಂದೆ ನೊಂದಣಿಗೆ ಹಾಜರುಪಡಿಸಿರುತ್ತೇನೆ ಎಂದರೆ ನಿಜ. ಆ ರೀತಿ ನಾನು ಸದರಿ ನಿಪಿ-33 ದಾಖಲೆಯನ್ನು ಬ್ಯಾಂಕ್ ಅಧಿಕಾರಿಯವರು ಸಹಿ ಮಾಡಿದ ನಂತರ ನಾನು ಅದನನ್ನು ಉಪನೊಂದಣಾಧಿಕಾರಿಯ ಮುಂದೆ ನೊಂದಣಿಗೆ ಹಾಜರುಪಡಿಸುತ್ತೇನೆ ಎಂದರೆ ನಿಜ . ತದಾದನಂತರ ಉಪನೊಂದಣಾಧಿಕಾರಿಯವರು ಹಾಜರಾತಿ ವಿನಾಯಿತಿ ಪತ್ರದಲ್ಲಿರುವ ಸಹಿ ಮತ್ತು ಡಿ ಟಿ.ಡಿ ಖುಲಾಸೆ ಪತ್ರದಲ್ಲಿರುವ ಸಹಿಯನ್ನು ಹೊಂದಾಣಿಕೆ ಮಾಡಿ ನೋಡಿದ ನಂತರ ಖುಲಾಸೆ ಪತ್ರವನ್ನು ನೊಂದಣಿ ಮಾಡುತ್ತಾರೆ ಎಂದರೆ ನಿಜ. ಆ ಕಾರಣದಿಂದ ಆರೋಪಿತರು ಯಾವುದೇ ಕೊಟ್ಟಿಯಾದ ಕಾಗದ ಪತ್ರಗಳನ್ನು ತಯಾರಿಸಿರುವುದಿಲ್ಲ ಬ್ಯಾಂಕ್ ಅಧಿಕಾರಿಗಳು ಸಹಿ ಮಾಡಿ ಕೊಟ್ಟ ನಂತರ ಆ ದಾಖಲೆಯನ್ನು ನಾನು ಉಪನೊಂದಣಾಧಿಕಾರಿಯ ಮುಂದೆ ಹಾಜರುಪಡಿಸಿ ನೊಂದಣಿ ಮಾಡಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತನು ಯಾವುದೇ ಅಪರಾಧ ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.

ಓ ಹೇ ಕೇ ಸರಿ ಇದೆ.